ಅಸಲು ದಾವಾ ನಂಃ 10/2021
ಡಿ ಡಬ್ಲ್ಯುಃ1

<u>ದಿನಾಂಕಃ **27-02-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ಕೆ ವಿ ವಕೀಲರಿಂದಃ</u>

1 ನೇ ವಾದಿಯ ತಂದೆಯ ಹೆಸರು ಅಣ್ಣೇಗೌಡ ಎನ್ನುವುದು ನನಗೆ ಗೊತ್ತಿರುತ್ತದೆ ಎಂದರೆ ಸರಿ. ದಾವಾ ಸ್ವತ್ತು 3 ವಾದಿಯ ತಂದೆಗೆ ಗೇಣಿಯ ಮುಖಾಂತರ ಬಂದಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತುಗಳು ನಮ್ಮ ಮನೆಯಿಂದ ಎಷ್ಟು ದೂರ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನನಗೆ ಗೋಪಾಲ ಗೌಡ ಮತ್ತು ಜಯಮ್ಮ ನನಗೆ ಅತ್ತೆ ಮತ್ತು ಮಾವ ಆಗಬೇಕು.

2. ನನ್ನ ಅತ್ತೆ ಮತ್ತು ಮಾವ ಮೂಲ ದಾವೆ ಸಂಖ್ಯೆ 199/1988 ರ ಮಂಜುನಾಥ ಗೌಡ ಮತ್ತು ಇತರರ ವಿರುದ್ಧ ಚಿಕ್ಕಮಗಳೂರು ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಲ್ಲಿ ದಾವಾ ಹೂಡಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ದಾವೆಯ ಸಂಬಂಧ ವಾದಿ ನಿಪಿ-86 ರಂತೆ ದಾಖಲೆಯನ್ನು ಹಾಜರುಪಡಿಸಿರುವ ವಿಚಾರವನ್ನು ನಮ್ಮ ವಕೀಲರು ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ 5 ನೇ ಪ್ರತಿವಾದಿ ಡಾಕಮ್ಮ ಅಂತ ಇದ್ದು ಅವರು 1 ನೇ ವಾದಿಯ ತಾಯಿ ಇರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ದಾವೆಯಲ್ಲಿ ದಾವಾ ಸ್ವತ್ತು 2 ಸರ್ವೆ ನಂಬರ್ 222 ರಲ್ಲಿ ನಮ್ಮ ಅತ್ತೆಗೆ 5 ಎಕರೆ 36 ಗುಂಟೆ ಜಮೀನು ಇರುತ್ತದೆ ಎಂದರೆ ಸಾಕ್ಷಿ ನಮಗೆ 6 ಎಕರೆ 37 ಗುಂಟೆ ಜಮೀನು ಇರುತ್ತದೆ ಎಂದು ಉತ್ತರಿಸುತ್ತಾರೆ.

3. ದಾವಾ ಸ್ವತ್ತು 2 ರ ಪೂರ್ವ ದಿಕ್ಕಿಗೆ ಡಾಕಮ್ಮ ಇವರಿಗೆ ಸೇರಿದ ಸರ್ವೆ ನಂಬರ್ 157 ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸರ್ವೆ ನಂಬರ್ 222 ರ ಪಶ್ಚಿಮ ಮತ್ತು ದಕ್ಷಿಣ ದಿಕ್ಕಿನಲ್ಲಿ ಸರ್ವೆ ನಂಬರ್ 223 ಇರುತ್ತದೆ ಎಂದರೆ ಸಾಕ್ಷಿ ದಕ್ಷಿಣ ದಿಕ್ಕಿಗೆ ಇರುತ್ತದೆ ಪಶ್ಚಿಮ ದಿಕ್ಕಿಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನ್ಯಾಯಾಲಯದ ಅದೇಶದಂತೆ ನಮ್ಮ ಅತ್ತೆ ಡಾಕಮ್ಮ ಇವರಿಗೆ ಸರ್ವೆ ನಂಬರ್ 222 ರಲ್ಲಿ 12.08 ಗುಂಟೆ ವರ್ಗಾವಣೆಯಾಗಿರುತ್ತದೆ ಎಂದರೆ ಸಾಕ್ಷಿ ಸದರಿ ಆಸ್ತಿ ನಮ್ಮ ಬಳಿ ಇರುತ್ತದೆ ಎಂದು ಉತ್ತರಿಸುತ್ತಾರೆ. ಸದರಿ 12.08 ಗುಂಟೆ ನಮ್ಮ ಸ್ವಾಧೀನದಲ್ಲಿ ಇರುವ ಬಗ್ಗೆ ನಾನು ನಮ್ಮ ಪ್ರತಿವಾದ ಪತ್ರದಲ್ಲಿ ತಿಳಿಸಿರುತ್ತೇನೆ.

4. ನಿಪಿ- 87 ರಂತೆ ನಮ್ಮ ಅತ್ತೆ ಜಯಮ್ಮ ಇವರ ಖಾತೆಯಿಂದ ಡಾಕಮ್ಮ ಇವರಿಗೆ 12.08 ಗುಂಟೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸರ್ವೆ ನಂಬರ್ 157/3 ರಲ್ಲಿ 1 ಎಕರೆ ಆಸ್ತಿಯನ್ನು ಮಂಜುನಾಥ ಗೌಡ ಇವರಿಂದ 2 ನೇ ಪ್ರತಿವಾದಿ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸರ್ವೆ ನಂಬರ್ 223 ರಲ್ಲಿ ನನ್ನ ಹೆಸರಿಗೆ ಜಮೀನು ಇರುವ ಬಗ್ಗೆ ಯಾವುದೇ ಖಾತೆ ಆಗಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸರ್ವೆ ನಂಬರ್ 223 ರಲ್ಲಿ ರಸ್ತೆ ಹಾದು ಹೋಗುವ ಬಗ್ಗೆ ಸರ್ವೆಯವರು ಸ್ಥಳಕ್ಕೆ ಬಂದು ನಕಾಶೆ ತಯಾರಿಸಿರುತ್ತಾರೆ ಎಂದರೆ ಸರಿ.

5. ನಿಪಿ- 89 ರಲ್ಲಿ ರಸ್ತೆ ಇರುವ ಬಗ್ಗೆ ನಕಾಶೆಯಲ್ಲಿ ತೋರಿಸಿರುತ್ತಾರೆ ಎಂದರೆ ಸರಿ. ನಾವು ರಸ್ತೆಯನ್ನು ಬಂದು ಮಾಡಿರುತ್ತೇವೆ ಎಂದು ವಾದಿ ಗ್ರಾಮ ಪಂಚಾಯ್ತಿ ಮಟ್ಟದಿಂದ ಸರ್ಕಾರದವರೆಗೂ ಹಲವಾರು ಅರ್ಜಿಗಳನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ನಂತರ ರಾಜಸ್ವ ನಿರೀಕ್ಷಕರು ಸ್ಥಳ ಪರಿಶೀಲನೆ ಮಾಡಿ ನಿಪಿ- 96 ರಂತೆ ಮಹಜರು ಮಾಡಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿ. ನಿಪಿ- 96 ರಲ್ಲಿ ನಾವು ಅವರಿಗೆ ಓಡಾಡಲು ತೊಂದರೆ ಮಾಡುವುದಿಲ್ಲ ಎಂದು ಒಪ್ಪಿಗೆ ಕೊಟ್ಟಿದ್ದೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅಧಿಕಾರಿಗಳು ಹಾಗೂ ಜನರ ಭಯದಿಂದ ಒಪ್ಪಿಗೆ ಕೊಟ್ಟಿರುತ್ತೇವೆ ಎಂದು ಉತ್ತರಿಸುತ್ತಾರೆ. ನಿಪಿ- 96 ರಲ್ಲಿ ಸಹಿ ಮಾಡಿರುವ ಸಾಕ್ಷಿದಾರರ ನಡುವೆ ನಮಗೂ ಮತ್ತು ಅವರಿಗೂ ಯಾವುದೇ ವೈಶಮ್ಯ ಇರುವುದಿಲ್ಲ ಎಂದರೆ ಸರಿ.

6. ನಿಪಿ- 96 ಕ್ಕೆ ನಾನು ಭಯದಿಂದ ಸಹಿ ಮಾಡಿರುತ್ತೇನೆ ಎಂದು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ನಿಪಿ- 96 ರಂತೆ ನಾನು ದಾರಿಗೆ ತೊಂದರೆ ಮಾಡುವುದಿಲ್ಲ ಎಂದು ಒಪ್ಪಿಕೊಂಡು ವಾದಿಗೆ ಓಡಾಡಲು ತೊಂದರೆ ಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ಅವರಿಗೆ ಓಡಾಡಲು ಅವಕಾಶ ಕೊಟ್ಟಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನ್ಯಾಯಾಲಯದ ಆದೇಶದಂತೆ ಪಿ.ಎಸ್.ಐ., ಹರಿಹರಪುರ ಇವರು ರಕ್ಷಣೆ ನೀಡದ ಕಾರಣ ನಿಪಿ- 98 ರಂತೆ ವೃತ್ತಾಧಿಕಾರಿಗಳಿಗೆ ವಾದಿ ರಕ್ಷಣೆ ಕೊಡುವಂತೆ ಅರ್ಜಿ ಕೊಟ್ಟಿರುವ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿ. ಸರ್ವೆ ನಂಬರ್ 137 ರಿಂದ 223 ರಲ್ಲಿ ರಸ್ತೆ ಹಾದು

ಹೋಗಿರುವ ಬಗ್ಗೆ ಸರ್ವೆ ಅಧಿಕಾರಿಗಳು ನಾಕಶೆ ತಯಾರಿಸಿ ವರದಿ ನೀಡಿದ್ದು ಸದರಿ ದಾಖಲೆಯನ್ನು ನಾನು ಪಡೆದುಕೊಂಡಿರುತ್ತೇನೆ ಎಂದರೆ ಸರಿ.

7. ನಿಪಿ- 100 ರಲ್ಲಿ ನಾವು ಸರ್ಕಾರಿ ರಸ್ತೆಯಲ್ಲಿ ಒತ್ತುವರಿ ಮಾಡಿರುತ್ತೇವೆ ಎಂದು ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಕರ್ನಾಟಕ ಸರ್ಕಾರದವರು ವ್ಯವಸಾಯ ಉದ್ದೇಶಗಳಿಗಾಗಿ ತಿರುಗಾಡಲು ಬಳಸುವ ಖಾಸಗಿ ಜಮೀನುಗಳಲ್ಲಿ ಕಾಲುದಾರಿ, ಬಂಡಿದಾರಿ ಅಥವಾ ಸೌಲಭ್ಯ ಒದಗಿಸುವ ಸಂಬಂಧ ಸುತ್ತೋಲೆ ಹೊರಡಿಸಿರುವ ಬಗ್ಗೆ ನನಗೆ ಮಾಹಿತಿ ಇರುತ್ತದೆ ಎಂದರೆ ಸರಿ. ವಾದಿಯು ತೋರಿಸಿದ ಚೆಕ್ಕು ಬಂದಿ ಸರಿಯಾಗಿ ಇರುವುದಿಲ್ಲ ಎಂದು ಹೇಳಿದ್ದು ನಾನು ನನ್ನ ಪ್ರತಿವಾದ ಪತ್ರದಲ್ಲಿ ದಾವಾ ಆಸ್ತಿಗಳ ನಿಜವಾದ ಚೆಕ್ಕುಬಂದಿಯ ಬಗ್ಗೆ ಬರೆಸಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ನಮ್ಮ ಮತ್ತು ವಾದಿಯ ಜಮೀನಿನ ಸುತ್ತ ಮುತ್ತಲು ನೀರಿನ ಕಾಲುವೆ, ಸರ್ಕಾರಿ ಹಾಡ್ಯ ಇರುತ್ತದೆ ಎಂದರೆ ಸರಿ.

8. ನಿಪಿ- 2 ರ ಕ್ರಯ ಪತ್ರವನ್ನು ನಾನು ನೋಡಿರುತ್ತೇನೆ ಎಂದರೆ ಸರಿ. ನಿಪಿ- 2 ರಲ್ಲಿ ಮಂಜುನಾಥ ಗೌಡ ಇವರು ನೀರು ಕಾಲುವೆ, ಹಾಡ್ಯ, ಹಕ್ಕಲು, ದಾರಿ, ರಸ್ತೆ ಮುಂತಾವುದಗಳ ಉಪಯೋಗಕ್ಕೆ ಸಂಬಂಧಪಟ್ಟಂತೆ ಏನಾದರು ಬಗೆಹರಿಸಿಕೊಡುವುದಾಗಿ ಹೇಳಿದ್ದರು ಎಂದರೆ ಸರಿ. ನಾನು ನಮ್ಮ ಮನೆಯ ಮುಂದುಗಡೆ ರಸ್ತೆಗೆ ವಾದಿ ಓಡಾಡದಂತೆ ಮಣ್ಣನ್ನು ತುಂಬಿರುತ್ತೇವೆ ಎಂದರೆ ಸರಿಯಲ್ಲ. ಮಣ್ಣನ್ನು ತೆಗೆಸುವಂತೆ ನ್ಯಾಯಾಲಯದಿಂದ ಅದೇಶ ಆಗಿತ್ತು ಎಂದರೆ ಸರಿಯಲ್ಲ. ಸದರಿ ರಸ್ತೆ ನಮ್ಮ ಮನೆ ಹಾಗೂ ಸರ್ವೆ ನಂಬರ್ 223 ರಲ್ಲಿ ನಾವು ಹೊತ್ತುವರಿ ಮಾಡಿದ ಜಾಗದ ಮಧ್ಯ ಭಾಗದಲ್ಲಿ ನಾನು ಮಣ್ಣನ್ನು ರಸ್ತೆಗೆ ತುಂಬಿರುತ್ತೇನೆ ಎಂದರೆ ಸರಿಯಲ್ಲ. ನಿಪಿ- 7 ರಂತೆ ನಾನು ಮಹಜರಿಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಭಯದಿಂದ ಸಹಿ ಮಾಡಿರುತ್ತೇನೆ ಎಂದು ಉತ್ತರಿಸುತ್ತಾರೆ.

9. ಎ.ಸಿ., ಮತ್ತು ಡಿ.ಸಿ., ಇಬ್ಬರು ಸ್ಥಳ ಪರಶೀಲನೆ ಬಂದಾಗ ನಮ್ಮ ವಕೀಲರು ಸ್ಥಳಕ್ಕೆ ಬಂದಿದ್ದರು ಎಂದರೆ ಸಾಕ್ಷಿ ಡಿ.ವೈ.ಎಸ್.ಪಿ., ಇವರು ಸ್ಥಳಕ್ಕೆ ಬಂದಾಗ ನಮ್ಮ ವಕೀಲರು ಬಂದಿದ್ದರು ಎಂದು ಉತ್ತರಿಸುತ್ತಾರೆ. ನಾನು ಭಯದಿಂದ ಮಹಜರಿಗೆ ಸಹಿ ಮಾಡಿರುತ್ತೇನೆ ಎಂದು ನಮ್ಮ ವಕೀಲರಿಗೆ ತಿಳಿಸಿದ ಬಗ್ಗೆ ನನಗೆ ನೆನಪಿರುವುದಿಲ್ಲ. ನಾನು ಭಯದಿಂದ

ಮಹಜರಿಗೆ ಸಹಿ ಮಾಡಿರುತ್ತೇನೆ ಎಂಬ ವಿಚಾರವನ್ನು ನನ್ನ ಪ್ರತಿವಾದ ಪತ್ರದಲ್ಲಿ ತಿಳಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ತೊಂದರೆ ಇತ್ತು ಎಂದು ಉತ್ತರಿಸುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಭಯದಿಂದ ದಾಖಲೆಗಳಿಗೆ ಸಹಿ ಮಾಡಿರುತ್ತೇನೆ ಎಂದು ಹೇಳಿದ ಬಗ್ಗೆ ನನಗೆ ನೆನಪಾಗುತ್ತಿಲ್ಲ. ನಿಪಿ- 7 ಕ್ಕೆ ನನ್ನ ಸಹಿಯನ್ನು ಬೆದರಿಸಿ ಪಡೆದುಕೊಂಡಿರುತ್ತಾರೆ ಎಂದು ನಾನು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ಸರಿ.

10. ರಸ್ತೆಗೆ ಹಾಕಿದ ಮಣ್ಣನ್ನು ನಾನು ತೆರವುಗೊಳಿಸುತ್ತೇನೆ ಎಂದು ಒಪ್ಪಿಕೊಂಡಿದ್ದು ನಂತರ ತೆರವುಗೊಳಿಸಿರುವುದಿಲ್ಲ ಎಂದರೆ ಸಾಕ್ಷಿ ನಾನು ರಸ್ತೆಗೆ ಮಣ್ಣನ್ನು ಹಾಕಿದ್ದೆ ಎಂದು ಉತ್ತರಿಸುತ್ತಾರೆ. ವಿವಾದಿತ ಜಾಗವು ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಳಪಡುತ್ತದೆ ಎಂದು ನಿಪಿ- 7 ಜೊತೆ ದಾಖಲೆ ಹಾಜರುಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ರಸ್ತೆಯ ಸಂಬಂಧ ನಮ್ಮ ಮತ್ತು ವಾದಿಯ ನಡುವೆ ದೂರು ಮತ್ತು ಪ್ರತಿದೂರು ದಾಖಲಿಸಿ ಪ್ರಕರಣ ಬಾಕಿ ಇರುತ್ತದೆ ಎಂದರೆ ಸರಿ. ವಾದಿ ರಸ್ತೆಯಲ್ಲಿ ಓಡಾಡಲು ದಾವೆ ಹಾಕಿದ ನಂತರ ತಹಶೀಲ್ದಾರ್ ಮತ್ತು ಜಿಲ್ಲಾಧಿಕಾರಿಗಳಿಗೆ ಅರ್ಜಿ ಕೊಟ್ಟಿರುವ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ನಿಪಿ- 33 ರಿಂದ 36 ರಲ್ಲಿ ಫೋಟೋದಲ್ಲಿ ಕಾಣುತ್ತಿರುವ ವ್ಯಕ್ತಿಗಳು ನಮ್ಮ ಬೆಂಬಲಿಗರು ಇರುತ್ತಾರೆ ಎಂದರೆ ಸಾಕ್ಷಿ ಗ್ರಾಮಸ್ಥರು ಎಂದು ಉತ್ತರಿಸುತ್ತಾರೆ . ನಿಪಿ- 33 ರಿಂದ 36 ರಲ್ಲಿ ನಮ್ಮ ವಕೀಲರು ಇರುತ್ತಾರೆ ಎಂದರೆ ಸರಿ. ನಿಪಿ- 35 ಮತ್ತು 36 ರಲ್ಲಿ ಕಾಣುವ ಮನೆ ನಮ್ಮದು ಎಂದರೆ ಸರಿ .

11. ನಿಪಿ-37 ರಲ್ಲಿ ವಲಯ ಅರಣ್ಯ ಅಧಿಕಾರಿಗಳು ಸರ್ವೆ ನಂಬರ್ 223 ಸರ್ಕಾರಿ ಜಮೀನು ಇರುತ್ತದೆ ಎಂದು ವರದಿ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ರಸ್ತೆಗೆ ಅಡ್ಡಲಾಗಿ ಒಂದು ಕಬ್ಬಿಣದ ಗೇಟನ್ನು ಅಳವಡಿಸಿರುತ್ತೇವೆ ಎಂದರೆ ಸಾಕ್ಷಿ ನಮ್ಮ ಮನೆಯ ಗೇಟು ಎಂದು ಉತ್ತರಿಸುತ್ತಾರೆ. ಸದರಿ ಗೇಟಿನ ಅಕ್ಕ ಪಕ್ಕ ಬೇಲಿ ಇರುತ್ತದೆ ಎಂದರೆ ಸಾಕ್ಷಿ ಅದು ನಮ್ಮ ಮಾವ ಮಾಡಿರುತ್ತಾರೆ ಎಂದು ಉತ್ತರಿಸಾತ್ತಾರೆ. ನಮ್ಮ ಮನೆ ಆದ ನಂತರ ರಸ್ತೆ ಮುಂದುವರೆದಿದ್ದು ನಾನು ಗೇಟನ್ನು ಅಳವಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ- 83 ರಂತೆ ರಸ್ತೆಯ ಮಧ್ಯ ಗೇಟಿರುತ್ತದೆ ಎಂದರೆ ಸಾಕ್ಷಿ ಅದು ನಮ್ಮ ಮನೆಯ ಗೇಟು ಎಂದು ಉತ್ತರಿಸುತ್ತಾರೆ. ನಿಪಿ- 19 ರಿಂದ 22 ರಲ್ಲಿ ನಮ್ಮ ಅತ್ತೆ ನಿಂತು ಕೊಂಡಿದ್ದು ಸದರಿ ರಸ್ತೆ ನೇರವಾಗಿ ನಮ್ಮ ಮನೆಗೆ ಹೋಗುತ್ತದೆ ಎಂದರೆ ಸರಿ. ನಿಪಿ-

19 ರಿಂದ 22 ರಲ್ಲಿ ರಸ್ತೆಗೆ ಅಡ್ಡಲಾಗಿ ತಂತಿ ಕಟ್ಟಿರುತ್ತೇನೆ ಎಂದರೆ ಸಾಕ್ಷಿ ಅದು ಸೋಲಾರ್ ಹೈಬಿಸ್ ಎಂದು ಉತ್ತರಿಸುತ್ತಾರೆ.

12. ಸದರಿ ಸೋಲಾರ್ ಹೈಬಿಸ್ ತಂತಿಗೆ ನಾನು ವಿದ್ಯುತ್ ಸಂಪರ್ಕ ಕೊಟ್ಟಿರುತ್ತೇವೆ ಎಂದು ವಾದಿ ತಹಶೀಲ್ದಾರ್, ಪೊಲೀಸ್ ಹಾಗೂ ಮೆಸ್ಕಾಂ ಅಧಿಕಾರಿಗಳಿಗೆ ಅರ್ಜಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಮೆಸ್ಕಾಂ ಅಧಿಕಾರಿಗಳು ಸ್ಥಳಕ್ಕೆ ಬಂದು ಹೋಗಿರುತ್ತಾರೆ ಎಂದು ಉತ್ತರಿಸುತ್ತಾರೆ. ಸದರಿ ಗೇಟನ್ನು ಅಳವಡಿಸಿ ಸುಮಾರು 10 ವರ್ಷಗಳು ಆಗಿರುತ್ತಾದೆ. ನಾನು ನಿಪಿ- 41 ರಂತೆ ರಾಜಸ್ವ ನಿರೀಕ್ಷಕರು ಹಾಗೂ ಗ್ರಾಮ ಲೆಕ್ಕಾಧಿಕಾರಿಯವರು ಸ್ಥಳಕ್ಕೆ ಬಂದಾಗ ಯಾವುದೇ ಗೇಟನ್ನು ಅಳವಡಿಸಿರುವುದಿಲ್ಲ ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ. ನಿಪಿ- 41 ರಂತೆ ಹೇಳಿಕೆ ಕೊಟ್ಟಿರುವುದು ಸತ್ಯವಾಗಿರುತ್ತದೆ ಎಂದರೆ ಸರಿ. ಪಿ.ಎಸ್.ಐ., ಇವರು ಸ್ಥಳ ಪರಿಶೀಲನೆಗೆ ಬಂದಾಗ ಅಲ್ಲಿ ಯಾರು ಬಂದಿದ್ದರು ಎಂದು ಅವರ ಹೆಸರು ನೆನಪಿರುವುದಿಲ್ಲ ಆದರೆ ನಮ್ಮ ಪರಿಚಯದವರು ಅಕ್ಕ ಪಕ್ಕದ ತೋಟದವರು ಬಂದಿದ್ದರು ಎಂದು ಉತ್ತರಿಸುತ್ತಾರೆ.

13. ದಿನಾಂಕ 07.02.2022 ರಂದು ತಹಶೀಲ್ದಾರರವರು ಸ್ಥಳಕ್ಕೆ ಬಂದಾಗ ನಾವು ಮತ್ತು ವಾದಿಯರು ರಸ್ತೆಯ ಸಂಬಂಧ ಸೌಹಾರ್ದಯುತವಾಗಿ ವಿವಾದ ಬಗೆಹರಿಸಿಕೊಳ್ಳುತ್ತೇವೆ ಎಂದು ಹೇಳಿದ್ದೆವು ಎಂದರೆ ಸಾಕ್ಷಿ ನನಗೆ ನೆನಪಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಿಪಿ- 50 ಕ್ಕೆ ನಮ್ಮ ಅತ್ತೆ ಜಯಮ್ಮ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಅವರಿಗೆ ವಯಸ್ಸು ಆಗಿದೆ ಆ ಕಾರಣಕ್ಕಾಗಿ ಮಾಡಿರುತ್ತಾರೆ ಎಂದು ಗೊತ್ತಾಗುವುದಿಲ್ಲ ಎಂದು ಉತ್ತರಿಸುತ್ತಾರೆ. ನಿಪಿ- 50 ರಲ್ಲಿ ನನ್ನ ಸಹಿ ಇರುತ್ತದೆ ಎಂದರೆ ಸರಿ. ಸರ್ವೆಯವರು ಸರ್ವೆ ನಂಬರ್ 222 ನ್ನು ಅಳತೆ ಮಾಡಲು ಬಂದಾಗ ನಾನು ಅವರಿಗೆ ಅಳತೆ ಮಾಡಲು ಬಿಟ್ಟು ಕೊಟ್ಟಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ಸ್ವಾಧೀನ ಎಂದು ಉತ್ತರಿಸುತ್ತಾರೆ. ಸರ್ವೆ ನಂಬರ್ 223 ನಮ್ಮ ಜಮೀನಲ್ಲಿ ಹಾದು ಹೋಗುತ್ತದೆ ಎಂಬುದರ ಬಗ್ಗೆ ನಮ್ಮ ಬಳಿ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ.

14. ವಲಯ ಅರಣ್ಯ ಅಧಿಕಾರಿಗಳು ಸರ್ವೆ ನಂಬರ್ 223 ರಲ್ಲಿ ನಾನು 1 ಎಕರೆ 23 ಗುಂಟೆ ಯನ್ನು ಒತ್ತುವರಿ ಮಾಡಿರುತ್ತೇವೆ ಎಂದು ವರದಿ ನೀಡಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತು 1 ಮತ್ತು 2 ಡಾಕಮ್ಮ ಇವರ ಹೆಸರಿಗೆ ನ್ಯಾಯಾಲಯದ ಆದೇಶದಂತೆ

ಖಾತೆಯಾಗಿದ್ದು ನಂತರ ವಾದಿಗೆ ವಿಭಾಗ ಮುಖಾಂತರ ಖಾತೆಯಾಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಮ್ಮ ಮನೆಯ ಪಕ್ಕದ ಮಂಜುನಾಥ ಗೌಡ ಇವರು ತೀರಿಕೊಳ್ಳುವ  ಪೂರ್ವದಲ್ಲಿ ನಮ್ಮೊಂದಿಗೆ ಚೆನ್ನಾಗಿ ಇದ್ದರು ಎಂದರೆ ಸರಿ. ಮಂಜುನಾಥಗೌಡ ಇವರು ರಸ್ತೆಯ ಸಂಬಂಧ ವಾದಿಯ ವಿರುದ್ಧ ದೂರು ಕೊಟ್ಟಿದ್ದರು ಎಂದರೆ ಸಾಕ್ಷಿ ಅದು ಅವರ ಮನೆಯ ಒಳಗೆ ಗಲಾಟೆಯಾದ ಸಂಬಂಧ ದೂರು ಕೊಟ್ಟಿದ್ದರು ಎಂದು ಉತ್ತರಿಸುತ್ತಾರೆ. ಸದರಿ  ಪ್ರಕರಣದಲ್ಲಿ ನಾನು ಒಬ್ಬಳು ಸಾಕ್ಷಿದಾರಳು ಇದ್ದೆ ಎಂದರೆ ಸರಿ.  ಸದರಿ ಪ್ರಕರಣ ಇತ್ಯರ್ಥಕ್ಕೆ ಬಾಕಿ ಇರುತ್ತದೆ ಎಂದರೆ ಸರಿ.

15. ದಿನಾಂಕ 20.02.2025 ರಂದು ಆ ದಿನ ಪಿ.ಎಸ್.ಐ,. ಇವರ ವಿಚಾರಣೆ ಸದರಿ ಕ್ರಿಮಿನಲ್ ಪ್ರಕರಣದಲ್ಲಿ ನಡೆಯುತ್ತಾ ಇತ್ತು ಎಂದರೆ ಸರಿ.  ಸದರಿ ಲೋಕೇಶ್ ಇವರು ತಮ್ಮ ವಿಚಾರಣೆಯಲ್ಲಿ ತನಿಖೆಯ ವೇಳೆ ತಾವು ಮಾಡಿದ ತನಿಖೆಯ ಬಗ್ಗೆ ಹೇಳಿರುತ್ತಾರೆ ಆ ಕಾಲಕ್ಕೆ ನಾನು ಹಾಜರಿದ್ದೆ ಎಂದರೆ ಸರಿ. ಸಾಕ್ಷಿ ಸದರಿ ಸಾಕ್ಷ್ಯಾ ಹೇಳಿಕೆಯ ದೃಢಿಕೃತ ಪ್ರತಿಯ್ನನು ನೋಡಿ ಗುರುತಿಸಿದ್ದು ಅದನ್ನು ನಿಪಿ- 128 ಎಂದು ಗುರುತಿಸಲಾಯಿತು.  ರಸ್ತೆಯ ಪಕ್ಕದಲ್ಲಿರುವ ಕಾಲುವೆಗಳಲ್ಲಿ ವಾದಿ ಪೈಪ್ ಗಳನ್ನು ಅಳವಡಿಸಿಕೊಂಡು ಕುಡಿಯುವ ನೀರಿನ ಪೂರೈಕೆ ಮಾಡಿಕೊಳ್ಳಲು ನಿಮ್ಮದು ತಕರಾರು ಇರುವುದಿಲ್ಲ ಎಂದರೆ ಸಾಕ್ಷಿ ತಕರಾರು ಇರುತ್ತದೆ ಎಂದು ಉತ್ತರಿಸುತ್ತಾರೆ. ಸದರಿ ಕಾಲುವೆ ಸರ್ವೆ ನಂಬರ್ 223 ರಲ್ಲಿ ಹಾದು ಹೋಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

16.  ಸರ್ವೆ ನಂಬರ್ 223 ರಲ್ಲಿ ಹಾದು ಹೋಗಿರುವ ರಸ್ತೆ ವಾದಿಯ ಜಮೀನಿನ ವರೆಗೆ ಹಾದು ಹೋಗಿರುತ್ತದೆ ಎಂದರೆ ಸರಿಯಲ್ಲ.  ಸದರಿ ರಸ್ತೆಗೆ ಅಡ್ಡಿಪಡಿಸಲು ನನಗಾಗಲೀ ಅಥವಾ ಇತರೆ ಯಾರಿಗೂ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ 222 ನಮ್ಮ ಜಮೀನಿನಲ್ಲಿ ರಸ್ತೆ ಹಾದು ಹೋಗಿರುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಜಯಮ್ಮ ಮತ್ತು 2 ನೇ ಪ್ರತಿವಾದಿ ಈ ದಾವೆಯಲ್ಲಿ ಅವರ ಪರ ಸಾಕ್ಷ್ಯ ನುಡಿಯಲು ನನಗೆ ಅಧಿಕಾರ ಪತ್ರ ಕೊಟ್ಟಿರುವುದಿಲ್ಲ ಎಂದರೆ ಸರಿ.  1 ನೇ ಪ್ರತಿವಾದಿ ಸಾಕ್ಷಿ ನುಡಿದರೆ ಸತ್ಯ ಗೊತ್ತಾಗುತ್ತದೆ ಎಂದು ಅವರನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ವಾದಿ ನೀರನ್ನು

ತೆಗೆದುಕೊಂಡು ಹೋಗಲು ನಮಗೆ ತಕರಾರು ಮಾಡಲು ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 23.02.2021 ರಿಂದ ವಾದಿ ರಸ್ತೆ ಮುಖಾಂತರ ಹೋಗುವಾಗ ನಾವು ಅವರಿಗೆ ಅಡ್ಡಿ ಪಡಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ವಾದಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ